MYSORE LEGISLATIVE ASSEMBLY

TWENTIETH DAY.

Thursday, 1st December 1955.

The House met in the Assembly Hall, Atara Kacheri, Bangalore, at Thirty Minutes past Eight of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS.

Mr. SPEAKER.—Questions relating to the Minister for Law and Education and the Chief Minister will be taken up later on.

Madagadakere and Gollahallikere (Estimates).

Q.—655. Sri D. M. GOVINDARAJU (Nelamangala).—

Will the Government be pleased to state :—

(*a*) when the estimate for Madagadakere of Sompur Hobli and Gollahallikere of Kasaba Hobli in Nelamangala Taluk was prepared ;

(*b*) at what stage it is pending now ?

A.—Sri Kadidal MANJAPPA (Minister for Revenue and Public Works).—

(*a*) Madagadakere August 1953.
Gollahallikere February 1954.

(*b*) *Madagadakere.*—This is under the consideration of the Government.

Gollahallikere.—The project is under scrutiny.

ಶ್ರೀ ಡಿ. ಎಂ. ಗೋವಿಂದರಾಜು.—ಈ ಕೆರೆಯ ಎಸ್ಟಿಮೇಟಾಗಿ ಎಷ್ಟು ದಿವಸವಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಆಗಸ್ಟ್ 1953ರಲ್ಲಿ ಎಂದು ಇಲ್ಲಿಯೇ ಕೊಟ್ಟಿದ್ದೇವೆ.

ಶ್ರೀ ಡಿ. ಎಂ. ಗೋವಿಂದರಾಜು.—ಎಸ್ಟಿಮೇಟ್ ಆಗಿರುವುದೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—61,800 ರೂಪಾಯಿಗಳು.

ಶ್ರೀ ಡಿ. ಎಂ. ಗೋವಿಂದರಾಜು.—ಅದು ಈಗ ಯಾವ ಸ್ಟೇಜಿನಲ್ಲಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದವರ ಪರಿಶೀಲನೆಯಲ್ಲಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಆದಷ್ಟು ಜಾಗ್ರತೆ ಮಂಜೂರು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದ ಪರಿಶೀಲನೆಯಲ್ಲಿದೆ. ಎಷ್ಟರೊಳಗೆ ತೀರ್ಮಾನವಾಗುತ್ತದೆಂದು ತಾರೀಖು ಹೇಳುವುದಕ್ಕಾಗುವುದಿಲ್ಲ.

ಶ್ರೀ ಡಿ. ಎಂ. ಗೋವಿಂದರಾಜು.—ಬಹಳ ದಿವಸಗಳಿಂದ ಈ ಕೆರೆ ಆಗಬೇಕೆಂದು ಹೇಳಿಕೊಳ್ಳುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರೇ ಒಂದೆರಡುಸಾರಿ ಹೇಳಿರುವ ನೆನಪಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಗೊಲ್ಲಹಳ್ಳಿಯ ಕೆರೆ ಎಸ್ಟಿಮೇಟ್ ಆಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—130 ಎಕರೆಗಳಿಗೆ ನೀರೊದುಗುತ್ತದೆಂದು ಅಂದಾಜಾಗಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಎಸ್ಟಿಮೇಟ್ ಆಗಿರುವುದು ಎಷ್ಟಕ್ಕೆ ?

ಶ್ರೀ ಕಡಿದಾಳ್ ಮಂಜಪ್ಪ.—24,000 ರೂಪಾಯಿಗಳಿಗೆ.

ಶ್ರೀ ಡಿ. ಎಂ. ಗೋವಿಂದರಾಜು.—ಯಾವ ಸ್ಟೇಜ್ ನಲ್ಲಿದೆ ಅದು ?

ಶ್ರೀ ಕಡಿದಾಳ್ ಮಂಜಪ್ಪ.—ನೂಪರಿಂಟೆಂಡಿಂಗ್ ಎಂಜಿನಿಯರು ಈ ಎಸ್ಟಿಮೇಟನ್ನು ಎಗ್ಸಿಕ್ಯೂಟಿವ್ ಎಂಜನಿಯರಿಗೆ ಕೆಲವು ಟೆಕ್ನಿಕಲ್ observations ನಮೇತ ಕಳುಹಿಸಿದ್ದಾರೆ.

ಶ್ರೀ ಡಿ. ಎಂ. ಗೋವಿಂದರಾಜು.—ಜಾಗ್ರತೆ ಮಂಜೂರು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಜಾಗ್ರತೆಯೆಂದರೆ ಕೆರೆಯ ವಿಷಯದಲ್ಲಿ ಅಷ್ಟುಬೇಗ ಮಾಡುವುದಕ್ಕಾಗುವುದಿಲ್ಲ. ಕೆರೆಯ ಎಸ್ಟಿಮೇಟುಗಳ ವಿಷಯದಲ್ಲಿ technical ವಿಷಯಗಳನ್ನು ನೋಡಬೇಕಾದದ್ದಿರುತ್ತದೆ. ಆದ್ದರಿಂದ ಯಾವಾಗ ಮಂಜೂರಾಗುತ್ತದೆ ದು ಹೇಳುವುದಕ್ಕಾಗುವುದಿಲ್ಲ. ಅಂತೂ ಜಾಗ್ರತೆ ತೀರ್ಮಾನ ತೆಗೆದು ಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇವೆ.

Hemavathi Project.

Q.—685. Sri B. HUTCHE GOWDA (Turuvekere).—

Will the Government be pleased to state :—

(*a*) whether it is a fact that a project has been prepared to construct